|| ಶ್ರೀ ಹರಿಃ ||
ವಸುದೇವಸುತಂ(ನ್) ದೇವಂ(ಙ) ಕಂಸಚಾಣೂರಮರ್ದನಂ
|
ದೇವಕೀಪರಮಾನಂದಂ(ಙ) ಕೃಷ್ಣಂ(ಮ್) ವಂದೇ
ಜಗದ್ಗುರುಮ್ ||

# || ಶ್ರೀಮದ್ಭಗವದ್ಗೀತಾ ಅರ್ಥವಿವೇಚನೆ ಮತ್ತು ವ್ಯಾಖ್ಯಾನ ||

**ಅಧ್ಯಾಯ 16: ದೈವಾಸುರ ಸಂಪದ್ವಿಭಾಗಯೋಗ**

1/2 (ಶ್ಲೋಕ 1-1), ಶನಿವಾರ, 04 ನವೆಂಬರ್ 2023

**ವಿವೇಚನಕಾರರು: ಗೀತಾ ವಿಶಾರದ ಶ್ರೀ ಡಾ. ಆಶು ಗೋಯಲ್ ಜಿ**

YouTube ಲಿಂಕ್: https://youtu.be/j6lG8yVi4o0

## ಪರಮಾತ್ಮಪ್ರಾಪ್ತಿಯ ಸಾಧನವಾದ ದೈವೀ ಸಂಪತ್ತಿನ ವರ್ಣನೆ

ನಾಮ ಸಂಕೀರ್ತನೆ, ಭಕ್ತಿಗೀತೆ ಹನುಮಾನ್ ಚಾಲೀಸಾ, ದೀಪ ಪ್ರಜ್ವಲನೆ, ಪ್ರಾರ್ಥನೆ ಹಾಗೂ ಗುರುವಂದನೆಯೊಂದಿಗೆ ಇಂದಿನ ವಿವೇಚನೆ ಆರಂಭವಾಯಿತು.

ಭಗವಂತನ ಅಪಾರ ಕೃಪೆಯಿಂದ ನಾವೆಲ್ಲ ಶ್ರೀಮದ್ಭಗವದ್ಗೀತೆಯ ಅಧ್ಯಯನ ಮಾಡಲು ಪ್ರಾರಂಭಿಸಿದ್ದೇವೆ. ಭಗವದ್ಗೀತೆಗೆ ಸರಿಸಮಾನವಾದ ಗ್ರಂಥ ಇನ್ನೊಂದಿಲ್ಲ ಎಂದು ಎಷ್ಟೋ ಸಂತ ಮಹಾತ್ಮರು ಶತಮಾನಗಳಿಂದ ಪದೇ ಪದೇ ಹೇಳುತ್ತ ಬಂದಿದ್ದಾರೆ. ಭಗವಂತನ ಕೃಪೆಯಿಂದ ನಾವು ಎರಡನೇ ಹಂತವನ್ನು ತಲುಪಿದ್ದೇವೆ. ಮೊದಲ ಹಂತವು ಚಿಣ್ಣರ ಬಾಲವಾಡಿಯಂತಿತ್ತು ಈಗ ನಾವು ಪ್ರಾಥಮಿಕ ಶಾಲೆಯ ಹಂತ ತಲುಪಿದ್ದೇವೆ. ಮೊದಲ ಹಂತದ ಸಂಸ್ಕೃತ ವ್ಯಾಕರಣದಲ್ಲಿ ಅನುಸ್ವಾರ, ವಿಸರ್ಗ, ಆಘಾತ, ಇತ್ಯಾದಿ ನಿಯಮಗಳನ್ನು ಸ್ವಲ್ಪ ಅರಿತುಕೊಂಡಿದ್ದೇವೆ. ಹನ್ನೆರಡನೆಯ ಅಧ್ಯಾಯದಲ್ಲಿ ಭಕ್ತನ ೩೯ ಲಕ್ಷಣಗಳ ಬಗ್ಗೆ ಮತ್ತು ಹದಿನೈದನೆಯ ಅಧ್ಯಾಯದಲ್ಲಿ ಪುರುಷೋತ್ತಮ ಯೋಗದ ಬಗ್ಗೆ ಅರಿತಿದ್ದೇವೆ.

ಹದಿನೈದನೆಯ ಅಧ್ಯಾಯದಲ್ಲಿ ಭಗವಂತ ತನ್ನ ಅತ್ಯಂತ ಉನ್ನತವಾದ ಸ್ವರೂಪವನ್ನು ವರ್ಣಿಸಿದ್ದಾರೆ. ಜ್ಞಾನೇಶ್ವರ ಮಹಾರಾಜರು ಗೀತೆಯ ಹದಿನೈದನೆಯ ಅಧ್ಯಾಯವನ್ನು ಪೂರ್ಣಾಹುತಿಯ ಅಧ್ಯಾಯ, ಹದಿನಾರನೇ ಮತ್ತು ಹದಿನೇಳನೆಯ ಅಧ್ಯಾಯಗಳನ್ನು ಪರಿವಿಡಿ ಮತ್ತು ಹದಿನೆಂಟನೇ ಅಧ್ಯಾಯವನ್ನು ಸಾರಾಂಶವೆಂದು ಹೇಳಿದ್ದಾರೆ. ಏಳನೇ ಮತ್ತು ಒಂಬತ್ತನೇ ಅಧ್ಯಾಯಗಳಲ್ಲಿ ಭಗವಂತ ಕೆಲವು ವಿಷಯಗಳನ್ನು ತಿಳಿಸಿದಾಗ ಅರ್ಜುನ ಭಗವಂತನನ್ನು ಕೆಲವು ಪ್ರಶ್ನೆಗಳನ್ನು ಕೇಳಿದ್ದನು. ಆದ್ದರಿಂದ ಭಗವಂತ ತಿಳಿಸುತ್ತಿದ್ದುವ ವಿಷಯ ಅಪೂರ್ಣವಾಗಿ ಉಳಿದಿತ್ತು ಹೀಗಾಗಿ ಭಗವಂತನಿಗೆ ತಾನು ಬಯಸಿದಷ್ಟು ವಿಷಯವನ್ನು ವಿವರಿಸಲು ಸಾಧ್ಯವಾಗಿರಲಿಲ್ಲ ಒಂಬತ್ತನೆಯ ಅಧ್ಯಾಯದಲ್ಲಿ ತಿಳಿಸಿದ ಆಸುರೀ ಮತ್ತು ದೈವಿಕ ಗುಣಗಳನ್ನು ಹದಿನಾರನೇ ಅಧ್ಯಾಯದಲ್ಲಿ ಭಗವಂತ ವಿವರಿಸುತ್ತಾರೆ.

ನಮ್ಮ ಈ ಜನ್ಮದ ಪುಣ್ಯವೋ, ಹಿಂದಿನ ಜನ್ಮದ ಪುಣ್ಯವೋ, ನಮ್ಮ ಪೂರ್ವಜರು ಮಾಡಿದ ಪುಣ್ಯದ ಫಲವೋ ಅಥವಾ ಯಾವುದೋ ಸಂತ ಮಹಾತ್ಮರ ಆಶೀರ್ವಾದವೋ ನಾವು ಗೀತೆಯನ್ನು ಓದುವಂತಹ ಭಗವದ್ಕಾರ್ಯದಲ್ಲಿ ತೊಡಗಿದ್ದೇವೆ. ಗೀತೆಯನ್ನು ಓದಲು ನಾವು ನಾವಾಗಿಯೇ ನಮ್ಮನ್ನು ಆಯ್ದುಕೊಂಡಿಲ್ಲ ಗೀತೆಯನ್ನು ಓದಲು ಭಗವಂತ ನಮ್ಮನ್ನು ಆಯ್ಕೆ ಮಾಡಿದ್ದಾರೆ.

**ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ |**
**ತತ್ಪ್ರಸಾದಾತ್ಪರಾಂ ಶಾಂತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಮ್॥(೧೮.೬೨)**
ನೀನು ಎಲ್ಲ ರೀತಿಯಿಂದಲೂ ನನಗೆ ಶರಣಾಗು, ನನ್ನನ್ನು ಆಶ್ರಯಿಸಬೇಕು. ಈ ರೀತಿ ಮಾಡಿದಾಗ ಶಾಂತಿ ಪ್ರಾಪ್ತವಾಗಿ ನೀನು ಶಾಶ್ವತ ಪರಮಪದವನ್ನು ಪಡೆಯುವೆ ಎಂದು ಶ್ರೀ ಕೃಷ್ಣ ಪರಮಾತ್ಮ ಅರ್ಜುನನಿಗೆ ಹೇಳುತ್ತಾರೆ.

ಆದಿ ಗುರು ಶಂಕರಾಚಾರ್ಯರು ಒಂಬತ್ತನೇ ಶತಮಾನದಲ್ಲಿ ಎಲ್ಲಾ ಧರ್ಮಗ್ರಂಥಗಳನ್ನು ಸಂಶೋಧಿಸಿದರು. ಎಲ್ಲೆಡೆ ಸಂಚರಿಸಿದರು, ತರುವಾಯ ಅನೇಕ ಬೌದ್ಧ ಮಠಗಳನ್ನು ಸನಾತನ ವಿಹಾರಗಳನ್ನಾಗಿ ಪರಿವರ್ತಿಸಿದರು. ಅವರು ತಮ್ಮ **ಭಜ ಗೋವಿಂದಂ ಭಾಷ್ಯ**ದಲ್ಲಿ ಹೇಳಿದ್ದಾರೆ,

**ಭಗವದ್ಗೀತಾ ಕಿಂಚಿದಧೀತಾ**
**ಗಂಗಾಜಲ-ಲವಕಣಿಕಾ ಪೀತಾ |**
**ಸಹೃದಪಿ ಯೇನ ಮುರಾರಿ ಸಮರ್ಚಾ**
**ಕ್ರಿಯತೇ ತಸ್ಯ ಯಮೇನ ನ ಚರ್ಚಾ || (೨೧)**

ನಮ್ಮ ಜೀವನದಲ್ಲಿ ಸ್ವಲ್ಪವಾದರೂ ಗೀತೆಯನ್ನು ಅಳವಡಿಸಿಕೊಂಡರೆ ನಾವು ಭಗವಂತನಿಗೆ ಅತೀವ ಹತ್ತಿರದವರಾಗುತ್ತೇವೆ. ಯಮರಾಜನ ಶಾಸನವೂ ನಮಗೆ ಅನ್ವಯಿಸದು. ವೇದಗಳನ್ನು ಭಗವಂತನ ಪ್ರಶ್ವಾಸ ಎಂದು ಕರೆಯಲಾಗುತ್ತದೆ. ಭಗವಂತನಾದ ವಿಷ್ಣುವು ನಿದ್ರಿಸುತ್ತಿರುವಾಗ ಅವನ ಪ್ರಶ್ವಾಸದಿಂದ ಹೊರಹೊಮ್ಮಿದ ಧ್ವನಿಯಿಂದ ವೇದಗಳ ಶ್ಲೋಕಗಳು ಪ್ರಕಟವಾಗಿವೆ. ಅದೇ ನಮಗೆಲ್ಲರಿಗೂ ದೊಡ್ಡ ಜ್ಞಾನದ ಭಂಡಾರವಾಗಿದೆ. ಗೀತೆಯಂತೂ ಭಗವಂತನ ಶ್ರೀಮುಖದಿಂದ ಪ್ರಕಟವಾದ ವಾಣಿಯಾಗಿದೆ.

ಮಾನವ ಜೀವನದ ಉದ್ಧಾರಕ್ಕಾಗಿ **ಐದು 'ಗ'ಗಳ** ಉಲ್ಲೇಖ ಈ ರೀತಿಯಾಗಿದೆ.
**೧) ಗಊ (ಗೌ ಅಂದರೆ ಹಸು)**
**೨) ಗಂಗಾ**
**೩) ಗಾಯತ್ರಿ**
**೪) ಗೀತಾ**
**೫) ಗೋವಿಂದ**

**ಸರ್ವೋಪನಿಷದೋ ಗಾವೋ ದೋಗ್ಧಾ ಗೋಪಾಲ ನಂದನಃ ।**
**ಪಾರ್ಥೋವತ್ಸ ಸುಧೀರ್ಭೋಕ್ತಾ ದುಗ್ಧಂ ಗೀತಾಮೃತಂ ಮಹತ್॥**
ಎಲ್ಲಾ ಉಪನಿಷತ್ತುಗಳ ಸಾರವಾದ ಗೀತೆಯನ್ನು ಹಸುವಿಗೆ ಹೋಲಿಸಲಾಗಿದೆ. ಹತ್ತನೆಯ ಅಧ್ಯಾಯದ ಮೂವತ್ತೊಂದನೆಯ ಶ್ಲೋಕದಲ್ಲಿ **"ಸ್ರೋತಸಾಮಸ್ಮಿ ಜಾಹ್ನವೀ"** ಅರ್ಥಾತ್ ನಾನು ನದಿಗಳಲ್ಲಿ ಗಂಗೆ ಎಂದು ಭಗವಂತ ಹೇಳಿದ್ದಾರೆ. ಹಾಗೆಯೇ ಹತ್ತನೆಯ ಅಧ್ಯಾಯದ ಮೂವತ್ತೈದನೆಯ ಶ್ಲೋಕದಲ್ಲಿ **"ಗಾಯತ್ರೀ ಛಂದಸಾಮಹಮ್"** ಅಂದರೆ ನಾನು ಛಂದಗಳಲ್ಲಿ ಗಾಯತ್ರಿ ಛಂದ" ಎಂದು ಹೇಳಿದ್ದಾರೆ.

**ಯ ಇಮಂ ಪರಮಂ ಗುಹ್ಯಂ ಮದ್ಭಕ್ತೇಷ್ವಭಿಧಾಸ್ಯತಿ |**
**ಭಕ್ತಿಂ ಮಯಿ ಪರಾಂ ಕೃತ್ವಾ ಮಾಮೇವೈಷ್ಯತ್ಯಸಂಶಯಃ ॥ (೧೮.೬೮)**

**ನ ಚ ತಸ್ಮಾನ್ಮನುಷ್ಯೇಷು ಕಶ್ಚಿನ್ಮೇ ಪ್ರಿಯಕೃತ್ತಮಃ |**
**ಭವಿತಾ ನ ಚ ಮೇ ತಸ್ಮಾದನ್ಯಃ ಪ್ರಿಯತರೋ ಭುವಿ॥ (೧೮.೬೯)**

"ಯಾರು ನನ್ನಲ್ಲಿ ಪ್ರೇಮವಿನ್ನಿಟ್ಟುಕೊಂಡು, ಈ ಪರಮವಾದ ರಹಸ್ಯಯುಕ್ತವಾದ ಗೀತಾಶಾಸ್ತ್ರವನ್ನು ನನ್ನ ಭಕ್ತರಿಗೆ ಶ್ರೇಯಸ್ಸಾಗಲೆಂದು ನಿಷ್ಕಾಮ ಭಾವದಿಂದ ತಿಳಿಸಿಕೊಡುತ್ತಾನೆಯೋ, ಪ್ರಚಾರ ಮಾಡುತ್ತಾನೆಯೋ, ಅಥವಾ ಇನ್ಯಾವುದೇ ರೀತಿಯಲ್ಲಿ ನನ್ನ ಭಕ್ತರಿಗೆ ತಲುಪುವಂತೆ ಮಾಡುತ್ತಾನೋ, ಅವನು ನನ್ನನ್ನೇ ಪಡೆಯುತ್ತಾನೆ. ಇದರಲ್ಲಿ ಯಾವುದೇ ಸಂಶಯವಿಲ್ಲ. ಅವನಿಗಿಂತ ಮಿಗಿಲಾಗಿ ನನ್ನ ಪ್ರಿಯಕಾರ್ಯವನ್ನು ಮಾಡುವವನು ಹಾಗೂ

ನನಗೆ ಹೆಚ್ಚಿನ ಸಂತೋಷವನ್ನು ಕೊಡುವವನು, ಮನುಷ್ಯರಲ್ಲಿ ಯಾರೂ ಇಲ್ಲವೇ ಇಲ್ಲ. ಅವನಿಗಿಂತ ಹೆಚ್ಚು ಪ್ರಿಯನಾದವನು ಈ ಭೂಮಂಡಲದಲ್ಲಿ ಭವಿಷ್ಯದಲ್ಲಿಯೂ ಬೇರೆ ಯಾರೂ ಹುಟ್ಟುವುದಿಲ್ಲ. ಆದ್ದರಿಂದ ನನ್ನ ಭಕ್ತರಿಗೆ ಭಕ್ತಿಪೂರ್ವಕವಾಗಿ ಗೀತಾಶಾಸ್ತ್ರವನ್ನು ಪ್ರಚಾರ ಮಾಡುವ ಸಾಧನೆಯು ಸರ್ವೋತ್ತಮವಾದ ಸಾಧನೆಯಾಗಿದೆ." ಹೀಗೆಂದು ಭಗವಂತ ೧೮ನೇ ಅಧ್ಯಾಯದಲ್ಲಿ ತಿಳಿಸಿ ಹೇಳಿದ್ದಾರೆ.

**ದೈವಾಸುರಸಂಪದ್ವಿಭಾಗಯೋಗ** ಇದು ಹದಿನಾರನೆಯ ಅಧ್ಯಾಯದ ಹೆಸರಾಗಿದೆ. ನಮ್ಮಲ್ಲಿ ಯಾವ ಗುಣಗಳನ್ನು ಅಳವಡಿಸಿಕೊಂಡರೆ ನಾವು ದೈವೀ ಗುಣಗಳುಳ್ಳವರು ಎಂದು ಕರೆಯಿಸಿಕೊಳ್ಳಲಾಗುತ್ತದೆ ಮತ್ತು ಯಾವ ಗುಣಗಳನ್ನು ಅಳವಡಿಸಿಕೊಂಡರೆ ನಾವು ಆಸುರೀ ಗುಣಗಳುಳ್ಳವರು ಎಂದು ಕರೆಯಿಸಿಕೊಳ್ಳಲಾಗುತ್ತದೆ ಎಂದು ಭಗವಂತ ಈ ಅಧ್ಯಾಯದಲ್ಲಿ ತಿಳಿಸಿದ್ದಾರೆ.

ನಾವೆಲ್ಲರೂ ಸತ್ವ, ರಜ ಮತ್ತು ತಮ ಈ ಮೂರು ಗುಣಗಳ ಮಿಶ್ರಣದಿಂದ ಮಾಡಲ್ಪಟ್ಟಿದ್ದೇವೆ. ಈ ಮೂರು ಗುಣಗಳ ಪ್ರಮಾಣದಲ್ಲಿರುವ ಭಿನ್ನತೆಯಿಂದ ನಮ್ಮ ಸ್ವಭಾವ, ಇಷ್ಟ-ಅನಿಷ್ಟಗಳು, ವ್ಯವಹಾರ, ರೂಪ ಮತ್ತು ಆಕಾರಗಳಲ್ಲಿ ವ್ಯತ್ಯಾಸ ಮೂಡುತ್ತದೆ.

**ಸಂತನ್ ಕೆ ಸಂಗ್ ಲಾಗೇ ರೇ - ಕಬೀರ್ ದಾಸ್ ಅವರ ಸುಂದರ ಒಂದು ಭಜನೆ.**
सन्तन के सङ्ग लाग रे तेरी अच्छी बनेगी,
अच्छी बनेगी, तेरी बिगड़ी बनेगी, तेरी बहु बडभाग रे, तेरी अच्छी बनेगी

सन्तन के सङ्ग, पुण्य कमाई, राम चरण अनुराग रे, तेरी अच्छी बनेगी,
सन्तन के सङ्ग लाग रे, तेरी अच्छी बनेगी. ॥ १ ॥

ध्रुव जी की बन गई, प्रह्लाद जी की बन गई,
गुरू सुमिरन में लाग रे, तेरी अच्छी बनेगी ॥२॥

कागा से तोहे हंस करेंगे, मिट जाए उर के दाग रे,
तेरी अच्छी बनेगी, सन्तन के सड् लाग रे तेरी अच्छी बनेगी ॥ ३ ॥

मोह निशा में बहुत दिन रोपे, मोह निशा में बहुत दिन सोये,
जाग सके तो बन्दे जग रे तेरी अच्छी बनेगी ॥ ४ ॥

सुत बिन नारी तीन आशाएँ, त्याग सके तो त्याग रे तेरी अच्छी बनेगी, सन्तन के सङ्ग लाग रे तेरी अच्छी बनेगी || ५ ॥

कहत कबीर राम सुमिरन में, कहत कबीर राम भजन में,
पाग सको तो अब पाग, तेरी अच्छी बनेगी ॥ ६ ॥

सन्तन के सङ्ग लाग रे, तेरी अच्छी बनेगी,
राम चरण अनुराग रे तेरी अच्छी बनेगी।

ಸತ್ಸಂಗವು ಜೀವನದ ಮೇಲೆ ಒಳ್ಳೆಯ ಪ್ರಭಾವ ಬೀರುತ್ತದೆ ಎಂಬುದನ್ನು ಕಬೀರರ ಈ ರಚನೆಯಿಂದ ತಿಳಿದು ಬರುತ್ತದೆ. ೪೦ ನಿಮಿಷಗಳ ಗೀತೆಯ ವರ್ಗದಲ್ಲಿ ಗೀತೆಯ ಶುದ್ಧ ಉಚ್ಚಾರಣೆಯನ್ನು ಕಲಿಯುವುದು ಮಾತ್ರವಲ್ಲ ಒಳ್ಳೆಯ ಮನಸ್ಸಿನ ಜನರ ಸಹವಾಸ ಪ್ರಾಪ್ತವಾಗುತ್ತದೆ. ಇದು ಬಹಳ ಮಹತ್ವದ್ದಾಗಿದೆ. ನಮ್ಮ ತರಬೇತುದಾರರು, ಸಹಪಾಠಿಗಳು ಸತ್ವಗುಣ ಉಳ್ಳವರಾಗಿರುತ್ತಾರೆ. ಅವರ ಸತ್ವಗುಣಗಳು ಧನಾತ್ಮಕವಾಗಿ ನಮ್ಮ ಮೇಲೆ ಪರಿಣಾಮ ಬೀರಿದಾಗ ನಮ್ಮ ಮೆದುಳಿನ ಪ್ರೋಗ್ರಾಮಿಂಗನಲ್ಲಿ ಕೂಡ ಬದಲಾವಣೆ ಆಗುತ್ತದೆ. ಆದ್ದರಿಂದ ಸಾಧ್ಯವಾದಷ್ಟು ತರಗತಿಗಳನ್ನು ಮತ್ತು ವಿವೇಚನೆಗಳನ್ನು ತಪ್ಪಿಸಿಕೊಳ್ಳಬಾರದು. ನಿಯಮಿತವಾಗಿ ಎಲ್ಲಾ ತರಗತಿಗಳನ್ನು ಹಾಜರಾದಾಗ ನಮ್ಮಲ್ಲಿಯ ಸಾತ್ವಿಕತೆ ಹೆಚ್ಚುವುದನ್ನು ನಾವು ತಾನಾಗಿಯೇ ಅನುಭವಿಸಬಹುದು.

ತಿಲಕ ಇಟ್ಟು, ಕೀರ್ತನೆ ಮಾಡಿ, ಆರತಿ ಬೆಳಗಿ, ಜನಿವಾರ ಧರಿಸಿ, ಜುಟ್ಟು ಬಿಟ್ಟರೆ ಭಕ್ತನಾಗಲು ಸಾಧ್ಯವೇ? ಎಂಬ ಪ್ರಶ್ನೆಗೆ ಭಗವಂತ, "ಇಲ್ಲ" ಎಂದು ಉತ್ತರಿಸುತ್ತಾರೆ. ಭಗವಂತ ಹನ್ನೆರಡನೆಯ ಅಧ್ಯಾಯದಲ್ಲಿ ಭಕ್ತನ ಲಕ್ಷಣಗಳನ್ನು, ಎರಡನೆಯ ಅಧ್ಯಾಯದಲ್ಲಿ ಸ್ಥಿತಪ್ರಜ್ಞರ ಲಕ್ಷಣಗಳನ್ನು, ಹದಿಮೂರನೆಯ ಅಧ್ಯಾಯದಲ್ಲಿ ಜ್ಞಾನಿಯ ಲಕ್ಷಣಗಳನ್ನು ಮತ್ತು ಹದಿನಾಲ್ಕನೆಯ ಅಧ್ಯಾಯದಲ್ಲಿ ಗುಣಾತೀತರ ಲಕ್ಷಣಗಳನ್ನು ತಿಳಿಸಿದ್ದಾರೆ. ಈಗ ಹದಿನಾರನೆಯ ಅಧ್ಯಾಯದಲ್ಲಿ ದೈವೀ ಹಾಗೂ ಆಸುರೀ ಗುಣ ಲಕ್ಷಣಗಳನ್ನು ತಿಳಿಸುತ್ತಿದ್ದಾರೆ. ಎಲ್ಲವನ್ನೂ ವೈಜ್ಞಾನಿಕವಾಗಿ ವಿವರಿಸಲಾಗಿದೆ. ನಮ್ಮನ್ನು ನಾವು ಏನೆಂದು ಪರಿಗಣಿಸುತ್ತೇವೆ ಎಂಬುದು ಮುಖ್ಯವಲ್ಲ. ಭಗವಂತನು ನೀಡಿದ ಪರಿಶೀಲನಾಪಟ್ಟಿಯಿಂದ ನಾವು ಅಂತಹ ಗುಣಲಕ್ಷಣಗಳನ್ನು ಹೊಂದಿದ್ದೇವೆಯೆ ಎಂದು ಪರಿಶೀಲಿಸುವುದು ಮಹತ್ವದ್ದಾಗಿದೆ. ನಾವು ಎಲ್ಲಾ ಇಪ್ಪತ್ತಾರು ದೈವಿಕ ಗುಣಗಳನ್ನು ಹೊಂದಿರಬೇಕಾಗಿಲ್ಲ. ಎಲ್ಲಾ ಗುಣಗಳು ಅತ್ಯುತ್ತಮವಾಗಿರಲೇಬೇಕು ಎಂದಲ್ಲ. ನಮ್ಮಲ್ಲಿರುವ ಗುಣಗಳಿಂದ ನಾವು ಪ್ರಗತಿ ಹೊಂದಬೇಕು. ಪ್ರತಿಯೊಂದು ಗುಣವನ್ನು ನಾವು ಗಮನಿಸಿದರೆ, ನಮ್ಮ ಇಡೀ ಜೀವನವನ್ನು ಪರಿವರ್ತಿಸಬಹುದು. ಆದರೆ ಅದನ್ನು ಇದ್ದಕ್ಕಿದ್ದಂತೆ ಬದಲಾಯಿಸಲಾಗುವುದಿಲ್ಲ. ಸ್ವಲ್ಪ ಯೋಚಿಸಿದರೆ ಬದಲಾಯಿಸಿಕೊಳ್ಳಲು ಸಾಧ್ಯವಿದೆ. ನಮ್ಮ ಸಾಧನೆಯ ಮಾರ್ಗದಲ್ಲಿ ಪ್ರಗತಿ ಪಡೆಯಬೇಕಾದರೆ ಈ ದೈವೀ ಗುಣಗಳನ್ನು ನಮ್ಮಲ್ಲಿ ಅಳವಡಿಸಿಕೊಳ್ಳಬೇಕು.

**16.1**

**ಶ್ರೀಭಗವಾನುವಾಚ**
**ಅಭಯಂ(ಮ್) ಸತ್ತ್ವಸಂಶುದ್ಧಿಃ(ರ್), ಜ್ಞಾನಯೋಗವ್ಯವಸ್ಥಿತಿಃ |**
**ದಾನಂ(ನ್) ದಮಶ್ಚ ಯಜ್ಞಶ್ಚ, ಸ್ವಾಧ್ಯಾಯಸ್ತಪ ಆರ್ಜವಮ್ ||16.1||**

ಶ್ರೀ ಭಗವಂತನು ಹೇಳಿದನು - ಭಯದ ಸರ್ವಥಾ ಅಭಾವ, ಅಂತಃಕರಣದ ಪೂರ್ಣ ನಿರ್ಮಲತೆ, ತತ್ವಜ್ಞಾನಕ್ಕಾಗಿ ಧ್ಯಾನಯೋಗದಲ್ಲಿ ನಿರಂತರ ದೃಢವಾದ ಸ್ಥಿತಿ ಮತ್ತು ಸಾತ್ವಿಕದಾನ, ಇಂದ್ರಿಯಗಳ ದಮನ, ಭಗವಂತನ, ದೇವತೆಗಳ ಮತ್ತು ಗುರುಜನರ ಪೂಜೆ ಹಾಗೂ ಅಗ್ನಿಹೋತ್ರಾದಿ ಉತ್ತಮ ಕರ್ಮಗಳ ಆಚರಣೆ, ವೇದ - ಶಾಸ್ತ್ರಗಳ ಪಠನ - ಪಾಠನ, ಭಗವಂತನ ನಾಮ ಮತ್ತು ಗುಣಗಳ ಕೀರ್ತನೆ, ಸ್ವಧರ್ಮ ಪಾಲನೆಗಾಗಿ ಕಷ್ಟವನ್ನು ಸಹಿಸುವುದು ಮತ್ತು ಶರೀರ ಇಂದ್ರಿಯಗಳ ಸಹಿತವಾಗಿ ಅಂತಃಕರಣದ ಸರಳತೆ

ಭಗವಂತ ಈ ಶ್ಲೋಕದಿಂದ ದೈವೀ ಗುಣಗಳ ವರ್ಣನೆಯನ್ನು ಆರಂಭಿಸುತ್ತಾರೆ.

**ಅಭಯ -** ಸಾಮಾನ್ಯವಾಗಿ ಹೇಳುವುದಾದರೆ, ನಿರ್ಭಯತೆಯು ಭೌತಿಕ ಗುಣವಾಗಿದೆ. ಅದರಲ್ಲಿ ಯಾವುದೇ ದೈವೀ ಗುಣ ಕಂಡು ಬರುವುದಿಲ್ಲ. ಸಾಮಾನ್ಯವಾಗಿ ಜನರು ಅಭಯ ಎಂದರೆ ನಿರ್ಭಯತೆ ಎಂದು ಪರಿಗಣಿಸುತ್ತಾರೆ.

ಹಿತೋಪದೇಶದಲ್ಲಿಯ ಈ ಶ್ಲೋಕದಲ್ಲಿ ಪಶುಗಳು ಮತ್ತು ಮನುಜರ ನಡುವಿನ ಭಿನ್ನತೆಯನ್ನು ತಿಳಿಸಲಾಗಿದೆ.
**ಆಹಾರ ನಿದ್ರಾ ಭಯ ಮೈಥುನಂ ಚ ಸಾಮಾನ್ಯಮೇತತ್ ಪಶುಭಿರ್ನರಾಣಾಮ್ |**
**ಧರ್ಮೋಹಿತೇಷಾಮಧಿಕೋ ವಿಶೇಷಃ ಧರ್ಮೇಣ ಹೀನಾಃ ಪಶುಭಿಃ ಸಮಾನಾಃ ||**
ಅಂದರೆ ಆಹಾರ, ನಿದ್ರೆ, ಭಯ, ಮೈಥುನ ಇವು ಮನುಷ್ಯ ಮತ್ತು ಪಶುಗಳಲ್ಲಿ ಸಮಾನವಾಗಿವೆ. ಆದರೆ ಮನುಷ್ಯನಲ್ಲಿರುವ ವಿಶೇಷತೆ ಎಂದರೆ ಆತನು ಪಾಲಿಸುವ ಧರ್ಮ. ಧರ್ಮಾಚರಣೆ ಮಾಡದ ವ್ಯಕ್ತಿ ಪಶು ಸಮಾನವಾಗಿರುತ್ತಾನೆ. ಭಗವದ್ಗೀತೆಯಲ್ಲಿ ಮನುಷ್ಯನ ಕರ್ತವ್ಯ ಕರ್ಮಗಳನ್ನು ಧರ್ಮ ಎಂದು ಉದ್ದೇಶಿಸಲಾಗಿದೆ. ಮನುಷ್ಯ ತನ್ನ ಕರ್ತವ್ಯ ಪಾಲನೆ ಮಾಡಿ ನರನಿಂದ ನಾರಾಯಣನಾಗಬಹುದು. ನಿತ್ಯ ನಿರಂತರ ಕರ್ತವ್ಯ ಪಾಲನೆಯಿಂದ ಪರಮಾತ್ಮನನ್ನು ಪಡೆಯಲು ಆ ಹಂತದವರೆಗೆ ನಾವು ತಲುಪಲು ಸಾಧ್ಯವಾಗುತ್ತದೆ. ಆತನೊಡನೆ ಏಕರೂಪವಾಗಲು ಸಾಧ್ಯವಾಗುತ್ತದೆ.

ಋಷಿಗಳು ಭಯದ ಲಾಭ ಮತ್ತು ದುರುಪಯೋಗ ಎರಡನ್ನೂ ವಿವರಿಸಿದ್ದಾರೆ. ಭಯದಲ್ಲಿ ಎರಡು ವಿಧಗಳಿವೆ. ಒಂದು ಸಾತ್ತ್ವಿಕ ಭಯ. ಇನ್ನೊಂದು ಅನಪೇಕ್ಷಿತ ಭಯ. ಅಭಯದ ಒಂದು ಅರ್ಥ ನಿರ್ಭಯತೆ ಮತ್ತು ಇನ್ನೊಂದು ನಿರಂಕುಶತೆ. ಖದೀಮರು ನಿರಂಕುಶವಾಗಿರುತ್ತಾರೆ. ಆದರೆ ಸೈನಿಕನು ನಿರ್ಭೀತನಾಗಿರುತ್ತಾನೆ. ಸೈನಿಕನು ಶಿಸ್ತುಬದ್ಧನಾಗಿರುತ್ತಾನೆ, ಅವನು ನಿಯಮಗಳು ಮತ್ತು ಆದೇಶಗಳಿಗೆ ಬದ್ಧನಾಗಿರುತ್ತಾನೆ. ಇಡೀ ರಕ್ಷಾ ವ್ಯವಸ್ಥೆಯು ತನ್ನ ಹಿಂದೆ ಇದೆ ಎಂಬುದರ ಅರಿವು ಅವನಿಗೆ ಇರುತ್ತದೆ. ಆದ್ದರಿಂದ ಅವನು ನಿರ್ಭಯವಾಗಿ ಸೀಮೆಯ ರಕ್ಷಣೆಗಾಗಿ

ಹೋಗಿ ನಿಲ್ಲುತ್ತಾನೆ.

'**ಬೇಪರ್ವಾಹ್ ಹೋ ಜಾಓ ಲಾಪರವಾಹ ನಹೀ**' ಎಂದು ಪೂಜ್ಯ ಸ್ವಾಮಿ ರಾಮಸುಖದಾಸ್ ಮಹಾರಾಜ್ ಅವರು ಹೇಳಿದ್ದಾರೆ. ಮೇಲ್ನೋಟಕ್ಕೆ ಇವೆರಡೂ ಪದಗಳ ಅರ್ಥ ಒಂದೇ ತರಹವಿದ್ದರೂ ಅವೆರಡರ ಅರ್ಥ ಬೇರೆಯಾಗಿದೆ. ಒಬ್ಬ ಸಂನ್ಯಾಸೀ ತನ್ನ ಊಟದ ಬಗ್ಗೆ ತಲೆ ಕೆಡಿಸಿಕೊಳ್ಳದೆ ಆರಾಮವಾಗಿ ಕುಳಿತರೆ ಅದು ನಿಶ್ಚಿತ. ಮತ್ತೊಂದೆಡೆ, ಒಬ್ಬ ಸಜ್ಜನ ತನ್ನ ಹೆಂಡತಿ ಮತ್ತು ಮಕ್ಕಳ ಆಹಾರದ ಬಗ್ಗೆ ಚಿಂತಿಸದೇ ಇಸ್ಪೀಟು ಆಡುತ್ತಾ ಕುಳಿತರೆ ಅವನು ನಿರಂಕುಶ. ಒಬ್ಬ ಸಂನ್ಯಾಸಿ ನಿರ್ಭೀತನಾಗಿ ವರ್ತಿಸಿದರೆ ಅವನು ಒಳ್ಳೆಯ ಫಲಿತಾಂಶಗಳನ್ನು ಪಡೆಯುತ್ತಾನೆ. ಆದರೆ ಗೃಹಸ್ಥ ನಿರಂಕುಶ ನಡವಳಿಕೆಯ ಕಾರಣದಿಂದ ಕೆಟ್ಟ ಪರಿಣಾಮಗಳನ್ನು ಅನುಭವಿಸಬೇಕಾಗುತ್ತದೆ. ಈ ಶ್ಲೋಕದಲ್ಲಿ ಭಗವಂತ ಅಭಯ ಎಂಬ ಪದವನ್ನು ನಿರ್ಭಯ ಎಂಬರ್ಥದಲ್ಲಿ ಬಳಸಿದ್ದಾರೆ. ಭಗವಂತನಲ್ಲಿ ಪೂರ್ಣ ನಂಬಿಕೆ ಇರುವವನು ನಿರ್ಭಯನಾಗಿರುತ್ತಾನೆ.

**ಹಮಾರೆ ಸಾಥ್ ಶ್ರೀ ರಘುನಾಥ ತೋ ಕಿಸ್ ಬಾತ್ ಕಿ ಚಿಂತಾ |**
**ಶರಣ್ ಮೇ ರಖ್ ದಿಯಾ ಜಬ್ ಮಾಥ ತೋ ಕಿಸ್ ಬಾತ್ ಕಿ ಚಿಂತಾ ||**
ಕೆಲವರ ಶರಣಾಗತಿ ಸಂಪೂರ್ಣವಾಗಿರುತ್ತದೆ. ಏನೇ ಆಗುವುದಾದರೂ ಭಗವಂತನ ಇಚ್ಛೆಯಿಂದ ಎಂದು ಅವರಿಗೆ ಸಂಪೂರ್ಣ ನಂಬಿಕೆ ಇರುತ್ತದೆ. ಸಂಕಟ ಬಂದರೂ ಅದು ಭಗವಂತನ ಇಚ್ಛೆ ಎಂದು ನಂಬುತ್ತಾರೆ. ಸಂತೋಷದ ಕ್ಷಣಗಳು ಅವರಿಗೆ ಭಗವಂತನ ಕೃಪೆ ಎಂದು ಅರ್ಥವಾಗಿರುತ್ತದೆ.

ರಾವಣನಿಗೂ ಮನಸ್ಸಿನಲ್ಲಿ ಹೆದರಿಕೆ ಇತ್ತು ಕಾರಣ ಆತನು ಮಾತೆ ಜಾನಕಿಯನ್ನು ಛಲದಿಂದ ಅಪಹರಿಸಿದ್ದನು.

ಭಯವಿಲ್ಲದಿದ್ದರೆ ಮಾತ್ರ ದೈವೀ ಗುಣಗಳ ಪಥದಲ್ಲಿ ಸಾಗಲು ಸಾಧ್ಯ. ಭಯದಲ್ಲಿ ಎರಡು ವಿಧಗಳಿವೆ. ಒಂದು ಆಂತರಿಕ ಭಯ. ಇದರ ಕಾರಣ ನಮಗೆ ಅರಿವಿರುವುದಿಲ್ಲ. ಧ್ಯಾನ, ಭಜನೆ, ಆರಾಧನೆ, ಇತ್ಯಾದಿಗಳು ಈ ರೀತಿಯ ಭಯವನ್ನು ದೂರಮಾಡುತ್ತವೆ. ಬಾಹ್ಯ ಭಯ ಅನೇಕ ಕಾರಣಗಳಿಂದ ಉಂಟಾಗಬಹುದು. ಹಾವು, ಸಿಂಹ, ಕಳ್ಳಕಾಕರು, ಮುಂತಾದುವುಗಳಿಂದ ಉಂಟಾಗುವ ಭಯ ಇದಕ್ಕೆ ನಿದರ್ಶನಗಳು. ಇಲ್ಲಿ ಎಚ್ಚರಿಕೆ ಅಗತ್ಯ. ಭಯ ಹಾಗು ಎಚ್ಚರಿಕೆ ಬೇರೆ ಬೇರೆ ಎಂಬುದನ್ನು ತಿಳಿದುಕೊಳ್ಳಬೇಕು.

**ಸತ್ತ್ವಸಂಶುದ್ಧಿ** - ಅಂದರೆ ಹೃದಯದ ಪರಿಶುದ್ಧತೆ ಹೊಂದಿರುವುದು. ಹಾಲಿನ ಪಾತ್ರೆ ಶುದ್ಧವಾಗಿರದಿದ್ದರೆ ಹಾಲು ಹಾಳಾಗುವುದು. ಕನ್ನಡಿಯ ಮೇಲೆ ಧೂಳಿದ್ದರೆ ಪ್ರತಿಬಿಂಬ ಸ್ಪಷ್ಟವಾಗಿ ಕಾಣುವುದಿಲ್ಲ. ಅಂತೆಯೇ, ಪರಿಶುದ್ಧ ಹೃದಯ ಇರದಿದ್ದರೆ ಪರಮಾತ್ಮನನ್ನು ಕಾಣಲು ಸಾಧ್ಯವಾಗುವುದಿಲ್ಲ. ಹಾಗಾಗಿ ನಿಷ್ಕಲ್ಮಶವಾದ ಹೃದಯ ಇರುವುದು ಅಗತ್ಯ.

**ಜ್ಞಾನಯೋಗವ್ಯವಸ್ಥಿತಿಃ** - ಜ್ಞಾನದ ಪ್ರಾಪ್ತಿಯಾಗಬೇಕೆಂದರೆ ಆತ್ಮಜ್ಞಾನವಾಗಬೇಕು ಎಂಬುದು ಇದರ ಅರ್ಥ. ಅಧ್ಯಾತ್ಮ ಜ್ಞಾನದಲ್ಲಿ ನಿತ್ಯತ್ವ ಅಂದರೆ ಸ್ಥಿರತೆ ಮತ್ತು ತತ್ವಜ್ಞಾನದ ಅರ್ಥ ರೂಪದಲ್ಲಿ ಪರಮಾತ್ಮನ ಸಾಕ್ಷಾತ್ಕಾರ, ಈ ಎಲ್ಲ ಸ್ಥಿತಿಗೆ ಜ್ಞಾನ ಎನ್ನಲಾಗಿದೆ. ಇದರ ವಿರುದ್ಧವಾದ ಅರಿವಿಗೆ ಅಜ್ಞಾನ ಎನ್ನಲಾಗಿದೆ. ಆತ್ಮಜ್ಞಾನ ಪ್ರಾಪ್ತಿಯಾಗಿ ಪರಮಾತ್ಮನೊಡನೆ ಏಕರೂಪನಾಗಲು ಮಾಡಿದ ಸಾಧನೆಯೇ ಜ್ಞಾನ ಯೋಗದ ಸ್ಥಿತಿ.

**ದಾನಮ್** - ಪ್ರತ್ಯುಪಕಾರವನ್ನು ಬಯಸದೇ, ಕರ್ತವ್ಯವೆಂದು ತಿಳಿದು, ಆಯಾ ದೇಶ, ಆಯಾ ಕಾಲಗಳಿಗೆ ಸೂಕ್ತವಾದ ಅವಶ್ಯಕ ವಸ್ತುಗಳನ್ನು ಅವಶ್ಯಕತೆ ಇರುವವರಿಗೆ, ಅವಶ್ಯಕತೆಗೆ ತಕ್ಕಷ್ಟು ಪ್ರಮಾಣದಲ್ಲಿ ಯಥಾಶಕ್ತಿ ಕೊಡುವುದು ದಾನ. ದಾನ ಮಾಡುವುದು ಬಹಳ ಮುಖ್ಯ. ನಾವು ಹಣದ ಮೇಲೆ ಅವಲಂಬಿತರಾಗಿರುತ್ತೇವೆ. ಎಷ್ಟು ಹಣ ಗಳಿಸುತ್ತಿರುವೆವು ಎಂದು ಅಯೋಚಿಸುತ್ತೇವೆ, ಹೆಚ್ಚು ಗಳಿಸಲು ಆಶಿಸುತ್ತೇವೆ. ಅದು ಒಳ್ಳೆಯದೇ. ಆದರೆ, ಈ ಹಣವನ್ನು ಸತ್ಕಾರ್ಯಕ್ಕೆ ಹೇಗೆ ಬಳಸಬೇಕೆಂದು ತಿಳಿದುಕೊಳ್ಳುವುದು ಮಹತ್ವದ್ದಾಗಿದೆ. ಗಳಿಕೆಯ ಶೇಕಡಾ ಹತ್ತರಷ್ಟನ್ನು ದಾನವಾಗಿ ನೀಡಬೇಕೆಂದು ಕೆಲವೆಡೆ ಹೇಳಲಾಗಿದೆ.

**देश हमें देता है सब कुछ, हम भी तो कुछ देना सीखें ॥धृ॥**

**सूरज हमें रौशनी देता, हवा नया जीवन देती है ।**

**भूख मिटने को हम सबकी, धरती पर होती खेती है ।**
**औरों का भी हित हो जिसमें, हम ऐसा कुछ करना सीखें ॥१॥**

**गरमी की तपती दुपहर में, पेड़ सदा देते हैं छाया ।**
**सुमन सुगंध सदा देते हैं, हम सबको फूलों की माला ।**
**त्यागी तरुओं के जीवन से, हम परहित कुछ करना सीखें ॥२॥**

**जो अनपढ़ हैं उन्हें पढ़ाएँ, जो चुप हैं उनको वाणी दें |**
**पिछड़ गए जो उन्हें बढ़ाएँ, समरसता का जगा दें ।**
**हम मेहनत के दीप जलाकर, नया उजाला करना सीखें ॥३॥**

ಕೇವಲ ಧನ ನೀಡುವುದಷ್ಟೇ ದಾನವಲ್ಲ, ಇತರ ಬಗೆಯಲ್ಲೂ ದಾನ ಮಾಡಬಹುದು. ತನ್ನ ಹತ್ತಿರ ಏನಿದೆಯೋ ಅದನ್ನು ದಾನ ಮಾಡುವ ಅಭ್ಯಾಸ ಬೆಳೆಸಿಕೊಳ್ಳಬೇಕು.

**ದಮಃ** - ಅಂದರೆ ಇಂದ್ರಿಯಗಳ ನಿಯಂತ್ರಣ. ಐದು ಕರ್ಮೇಂದ್ರಿಯಗಳು ಹಾಗು ಐದು ಜ್ಞಾನೇಂದ್ರಿಯಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವುದು ಎಂದು ಇದರ ಅರ್ಥ. ಈ ಪ್ರವಚನ ಕೇಳುತ್ತಿರುವಾಗಲೂ ಇಂದ್ರಿಯಗಳು ಬೇರೆ ಬೇರೆ ಕಾರ್ಯಗಳಲ್ಲಿ ನಿರತವಾಗಿರುತ್ತವೆ. ಇದನ್ನು ಮೊದಲು ಅರಿತುಕೊಂಡರೆ ಅವುಗಳ ನಿಯಂತ್ರಣ ಸಾಧ್ಯವಾಗುತ್ತದೆ.

**ಯಜ್ಞ** - ಯಜ್ಞ ಅಂದರೆ ಕೇವಲ ಹೋಮ ಅಥವಾ ಹವನ ಅಲ್ಲ. ಯಜ್ಞ ಸಮಷ್ಟಿಗೆ ಅಥವಾ ಲೋಕ ಕಲ್ಯಾಣಕ್ಕಾಗಿ ಕೈಗೊಳ್ಳುವ ಕಾರ್ಯ. ವೇದಗಳಲ್ಲಿ ಐದು ರೀತಿಯ ಯಜ್ಞಗಳನ್ನು ಉಲ್ಲೇಖಿಸಲಾಗಿದೆ. ನಾಲ್ಕನೇ ಅಧ್ಯಾಯದಲ್ಲಿ ೧೨ ಪ್ರಕಾರದ ಯಜ್ಞಗಳ ಬಗ್ಗೆ ಭಗವಂತ ವಿವರಿಸಿದ್ದಾರೆ. ಹತ್ತನೇ ಅಧ್ಯಾಯದಲ್ಲಿ "ಯಜ್ಞಗಳಲ್ಲಿ ನಾನು ಜಪ ಯಜ್ಞನಾಗಿದ್ದೇನೆ." ಎಂದು ಭಗವಂತ ಹೇಳಿದ್ದಾರೆ.

**ಸ್ವಾಧ್ಯಾಯ** - ಅಂದರೆ ಶಾಸ್ತ್ರಗಳ ಅಧ್ಯಯನ. ನಾನು ಯಾರು? ನನಗೆ ಮಾನವ ಜನ್ಮ ಏಕೆ ದೊರೆತಿದೆ? ಮಾನವನಾಗಿ ಹುಟ್ಟಿದ ಮೇಲೆ ನನ್ನ ನಿಯತ ಕರ್ಮಗಳೇನು? ಈ ವಿಷಯಗಳ ಜ್ಞಾನ ಪ್ರಾಪ್ತಿಗಾಗಿ ಅಭ್ಯಸಿಸುವುದು. ಈಗಾಗಲೇ ನಾವು ಗೀತಾ ಕಲಿಕೆ ಪ್ರಾರಂಭಿಸಿದ್ದೇವೆ. ಪಠಣ ಮಾಡಲು ಕಲಿಯುತ್ತಿರುವೆವು. ಅರ್ಥ ವಿವೇಚನೆಯಲ್ಲಿ ಪಾಲ್ಗೊಳ್ಳುತ್ತಿದ್ದೇವೆ. ಕಾಲಕ್ರಮೇಣ ಪ್ರತಿ ಶ್ಲೋಕವನ್ನು ಆಳವಾಗಿ ಅರಿತುಕೊಳ್ಳುತ್ತಿದ್ದೇವೆ. ಪ್ರತಿದಿನ ಹೊಸದಾಗಿ ಏನಾದರೂ ಕಲಿಯುತ್ತಿರಬೇಕು.

**ತಪಃ** - ಧರ್ಮ ಮತ್ತು ನಿಯಮ ಪಾಲಿಸುವುದಕ್ಕಾಗಿ ಶ್ರಮಿಸಬೇಕಾಗುತ್ತದೆ. ಕರ್ವಾ ಚೌತ್ ಉಪವಾಸವನ್ನು ಕೆಲವು ದಿನಗಳ ಹಿಂದೆ ಆಚರಿಸಲಾಯಿತು. ಆದರೆ ಅದನ್ನು ಸಂತೋಷವಾಗಿ ಆಚರಿಸಿದರೋ ಅಥವಾ ದುಃಖಿಯಾಗಿ ಮಾಡಿದರೋ ಎಂಬುದು ಮುಖ್ಯ. ಕೆಲವೊಮ್ಮೆ ಮುಸ್ಸಂಜೆಯಿಂದ ಚಂದ್ರನ ಉದಯಕ್ಕಾಗಿ ಕಾದು ಸಮಯ ಕಳೆಯುತ್ತದೆ. ಪ್ರಾತಃಕಾಲದಲ್ಲಿ ಪೂಜೆಯನ್ನು ಮಾಡದೆ ಏನನ್ನೂ ತಿನ್ನಬಾರದು, ಕುಡಿಯಬಾರದು ಎಂಬುದು ನಿಯಮ ನಿಶ್ಚಯವಾಗಿರುತ್ತದೆ. ಯಾವುದೋ ಕಾರಣದಿಂದ ಚಂದ್ರ ತಡವಾಗಿ ಉದಯಿಸಿದಾಗ ಆದ ಕಷ್ಟವನ್ನು ನಗು ನಗುತ್ತ ಸ್ವೀಕರಿಸಿದರೆ ಅದು ತಪ ಆಗಿರುತ್ತದೆ. ಶ್ರದ್ಧೆಯಿಂದ ಆಲಿಸುವುದೂ ಒಂದು ರೀತಿಯ ತಪಸ್ಸೇ. ತಾಯಿ ಪ್ರತಿದಿನವೂ ನಿಸ್ವಾರ್ಥಭಾವದಿಂದ ಎಲ್ಲರಿಗೂ ಅಡುಗೆ ಮಾಡುತ್ತಾರೆ. ಇದೂ ಸಹ ತಪಸ್ಸೇ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ನಾವು ಮಾಡುವ ಕಾರ್ಯವನ್ನು ಕರ್ತವ್ಯ ಪ್ರಜ್ಞೆಯಿಂದ ಮಾಡುವುದು ತಪ.

**ಆರ್ಜವಮ್ -** ಅಂದರೆ ಋಜುತ್ವ. ಸರಳವಾಗಿ, ಪ್ರಾಮಾಣಿಕವಾಗಿರುವುದು ಆರ್ಜವ. ವಿವೇಚಕರು ಇಲ್ಲಿ ಶಬರಿಯ ಉದಾಹರಣೆ ನೀಡಿದರು. ಶ್ರೀರಾಮ ಬರುವನೆಂದು ಮತಂಗ ಋಷಿಗಳು ಶಬರಿಗೆ ಹೇಳಿದಾಗ ಆಕೆಗೆ ಹದಿರನಾರರ ಹರೆಯ. ರಾಮ ಬಂದಾಗ ಶಬರಿಗೆ ಎಂಬತ್ತು ವರ್ಷ ವಯಸ್ಸು. ಆದರೆ ಆಕೆ ಎಂದೂ ಗುರುವಚನವನ್ನು ಮರೆಯಲಿಲ್ಲ. ರಾಮನ ಆಗಮನದ ವಿಳಂಬದಿಂದ ವಿಚಲಿತಳಾಗಲಿಲ್ಲ. ರಾಮ ಯಾವ ದಿಕ್ಕಿನಿಂದ ಬರುವನೆಂದು ತಿಳಿಯದ ಆಕೆ ಪ್ರತಿ ದಿನವೂ ಎಲ್ಲ ದಾರಿಗಳನ್ನೂ ಸ್ವಚ್ಛಗೊಳಿಸುತ್ತಿದ್ದಳು. ಹಣ್ಣುಗಳನ್ನು ಸಂಗ್ರಹಿಸಿ, ರುಚಿ ನೋಡಿ, ಸುಮಧುರ ಫಲಗಳನ್ನು ಇಟ್ಟುಕೊಂಡು ಕಾಯುತ್ತಿದ್ದಳು. ಇದು ಆರ್ಜವ. ಶಬರಿಯಲ್ಲಿ ನವಧಾಭಕ್ತಿ

ಇತ್ತೆಂದು ಸ್ವತಃ ಶ್ರೀರಾಮರೇ ಹೇಳಿದ್ದಾರೆ.

ಸಮರ್ಪಣೆಯ ಭಾವವನ್ನು ತಿಳಿದುಕೊಳ್ಳಲು ನವವಿಧ ಭಕ್ತಿಯ ಈ ಕಥೆ ನೆರವಾಗುತ್ತದೆ. ಶಬರಿಯು ಬುಡಕಟ್ಟು ಜನಾಂಗಕ್ಕೆ ಸೇರಿದ ಓರ್ವ ಬೇಟೆಗಾರನ ಮಗಳಾಗಿದ್ದಳು. ತನ್ನ ವಿವಾಹದ ಸಂದರ್ಭದಲ್ಲಿ ಭೋಜನ ತಯಾರಿಸಲು, ಹಿಂದಿನ ದಿನವೇ ತನ್ನ ತಂದೆಯು ಸಾವಿರಾರು ಕುರಿಗಳು ಹಾಗೂ ಟಗರುಗಳನ್ನು ತಂದಿರಿಸಿದ್ದನ್ನು ಶಬರಿಯು ಗಮನಿಸಿದಳು. ಅವುಗಳ ಕರುಣಾಜನಕ ಪರಿಸ್ಥಿತಿಯನ್ನು ಕಂಡು ಶಬರಿಗೆ ಕರುಣೆಯು ಉಕ್ಕಿ ಬಂತು. ತನ್ನ ಜೀವನದ ಬಗ್ಗೆಯೇ ಆಕೆಯಲ್ಲಿ ಜಿಗುಪ್ಸೆ ಹುಟ್ಟಿತು. ವಿವಾಹದ ದಿನ, ನಸುಕಿನ ವೇಳೆಯಲ್ಲಿಯೇ ಆಕೆಯು ಮನೆಯನ್ನು ತ್ಯಜಿಸಿ, ಗುರುವನ್ನು ಅನ್ವೇಷಿಸಲು ಹೊರಟುಬಿಟ್ಟಳು.

ಅನೇಕ ದಿನಗಳ ಪಯಣದ ಬಳಿಕ ಆಕೆಗೆ ಮಾತಂಗ ಮುನಿಗಳ ಭೇಟಿಯಾಗುತ್ತದೆ. ಶಬರಿಯು ಮಾತಂಗ ಋಷಿಗಳನ್ನೇ ತನ್ನ ಗುರುವೆಂದು ಸ್ವೀಕರಿಸುತ್ತಾಳೆ. ಮಾತಂಗ ಋಷಿಗಳ ಅಂತ್ಯಕಾಲವು ಸಮೀಪಿಸುವ ಹೊತ್ತಿಗೆ ಶಬರಿಯು ಹಣ್ಣು ಹಣ್ಣು ಮುದುಕಿ ಆಗಿರುತ್ತಾಳೆ. ಜೀವನವಿಡೀ ಮಾತಂಗ ಋಷಿಗಳ ಸೇವೆಯಲ್ಲಿಯೇ ಕಳೆದಿರುವ ತಾನೂ ಕೂಡ ಮಾತಂಗ ಋಷಿಗಳು ಪಡೆದುಕೊಂಡಿರುವ ಅದೇ ಶಾಂತಿಧಾಮವನ್ನು ತಲುಪಬೇಕೆಂದು ಬಯಸುತ್ತಾಳೆ. ಆಗ ಮಾತಂಗ ಋಷಿಗಳು, "ನೀನು ನನ್ನ ಕುರಿತಾಗಿ ಕೈಗೊಂಡಿರುವ ಅತ್ಯುತ್ಕೃಷ್ಟ ಸೇವೆಗೆ ಪ್ರತಿಯಾಗಿ ಭಗವಾನ್ ಶ್ರೀ ರಾಮಚಂದ್ರನೇ ನಿನಗೆ ದರ್ಶನವನ್ನು ನೀಡಲಿರುವನು. ಭಗವಾನ್ ಶ್ರೀ ರಾಮಚಂದ್ರನನ್ನು ರಾಮಾವತಾರದಲ್ಲಿಯೇ ಕಾಣುವಂತಹ ಸೌಭಾಗ್ಯವು ನಿನ್ನದಾಗಿರುತ್ತದೆ ಹಾಗೂ ಸ್ವಯಂ ಶ್ರೀ ರಾಮಚಂದ್ರನ ಅಮೃತಹಸಗಳಿಂದಲೇ ಮುಕ್ತಿಯನ್ನು ಪಡೆಯಲಿರುವ ಧನ್ಯಜೀವಿಯು ನೀನಾಗಲಿರುವೆ. ತನ್ನ ಪತ್ನಿಯಾದ ಸೀತಾಮಾತೆಯನ್ನು ಅರಸುತ್ತಾ ತನ್ನ ಸಹೋದರ ಲಕ್ಷ್ಮಣನೊಂದಿಗೆ ಇಲ್ಲಿಗೆ ಆಗಮಿಸಲಿರುವ ಪ್ರಭು ಶ್ರೀರಾಮಚಂದ್ರನನ್ನು ನಿರೀಕ್ಷಿಸುತ್ತಾ ನೀನು ಈ ಆಶ್ರಮದಲ್ಲಿಯೇ ಇದ್ದುಕೊಂಡು ಜೀವನವನ್ನು ಸಾಗಿಸು. ಆಗ ನಿನ್ನ ಭಕ್ತಿಯು ಫಲಪ್ರದವಾಗುತ್ತದೆ." ಎಂದು ಶಬರಿಗೆ ತಿಳಿಸಿ ಮಹಾಸಮಾಧಿಯನ್ನು ಹೊಂದುತ್ತಾರೆ. ಹೀಗೆ ತನ್ನ ಗುರುಗಳ ಮಾತುಗಳನ್ನನುಸರಿಸಿ ಶಬರಿಯು ಭಗವಾನ್ ಶ್ರೀ ರಾಮಚಂದ್ರನ ಆಗಮನವನ್ನೇ ನಿರೀಕ್ಷಿಸುತ್ತಾ ಕಾಲ ಕಳೆಯತೊಡಗುತ್ತಾಳೆ.

ಆಶ್ರಮದಲ್ಲಿ ಒಬ್ಬಂಟಿಯಾಗಿರುವ ಶಬರಿಯು ತನ್ನ ನಿತ್ಯಕರ್ಮಗಳನ್ನು ಪೂರೈಸುತ್ತಾ ರಾಮನ ಆಗಮನದ ದಾರಿ ಕಾಯುತ್ತಾ, ಅದಕ್ಕಾಗಿ ಆಶ್ರಮವನ್ನು ಸಜ್ಜುಗೊಳಿಸುವ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತಳಾಗುತ್ತಾಳೆ. ಪ್ರತೀ ಮುಂಜಾನೆಯೇ ಎಚ್ಚರಗೊಳ್ಳುವ ಆಕೆಯು, "ಇಂದಿನ ದಿನವು ರಾಮನ ಆಗಮನದ ಶುಭದಿನವಾಗಿರಬಹುದೇ?" ಎಂದು ಮನದಲ್ಲಿಯೇ ನೆನೆದುಕೊಳ್ಳುತ್ತಾ ದಿನ ಕಳೆಯುತ್ತಿರುತ್ತಾಳೆ. ಇಡೀ ದಿನ ರಾಮನ ಆಗಮನಕ್ಕಾಗಿ ಸಿದ್ಧಗೊಳಿಸುವುದರಲ್ಲಿ ತಲ್ಲೀನಳಾಗಿರುತ್ತಾಳೆ. ರಾಮನಿಗೆ ಕೂಡುವುದಕ್ಕಾಗಿ ಹಣ್ಣು ಹಂಪಲುಗಳನ್ನು ಸಂಗ್ರಹಿಸತೊಡಗುತ್ತಾಳೆ. ಪ್ರತಿಯೊಂದು ಹಣ್ಣನ್ನೂ ಕಚ್ಚಿ ಅದರ ರುಚಿಯನ್ನು ಪರಿಶೀಲಿಸಿ, ಆ ಹಣ್ಣುಗಳ ಪೈಕಿ ಅತ್ಯುತ್ತಮವಾದವುಗಳನ್ನು ಹಾಗೂ ಅತ್ಯಂತ ಸಿಹಿಯಾದವುಗಳನ್ನು ಮಾತ್ರವೇ ಅತ್ಯಂತ ಭಕ್ತಿಭಾವದಿಂದ ತನ್ನ ಪ್ರಭುವಿಗಾಗಿ ತೆಗೆದಿರಿಸುತ್ತಿರುತ್ತಾಳೆ, ರಾಮನು ಆಗಮಿಸುವ ಮಾರ್ಗದಲ್ಲಿರಬಹುದಾದ ಎಲ್ಲಾ ಮುಳ್ಳು ಕಲ್ಲುಗಳನ್ನು ತೆಗೆದು, ಕುರುಚಲು ಗಿಡಗಳನ್ನು ಕಿತ್ತೊಗೆಯುವುದರಲ್ಲಿ ಗಂಟೆಗಟ್ಟಲೆ ಮಗ್ನಳಾಗಿರುತ್ತಾಳೆ.

ಹೀಗೆ ತನ್ನ ಆಶ್ರಮಕ್ಕೆ ಮುಂದೊಂದು ದಿನ ಆಗಮಿಸಲಿರುವ ತನ್ನ ಪ್ರಭುವನ್ನು ನಿರೀಕ್ಷಿಸುತ್ತಾ ಶಬರಿಯು ಹಲವಾರು ವರ್ಷಗಳನ್ನೇ ಕಳೆದಿರುತ್ತಾಳೆ. ಕಡೆಗೂ ರಾಮಲಕ್ಷ್ಮಣರ ಆಗಮನವಾಗುತ್ತದೆ. ರಾವಣನಿಂದ ಅಪಹರಿಸಲ್ಪಟ್ಟಿರುವ ಸೀತಾಮಾತೆಯನ್ನು ಅರಸುತ್ತಾ ರಾಮಲಕ್ಷ್ಮಣರು ಶಬರಿಯ ಆಶ್ರಮಕ್ಕೆ ಬರುತ್ತಾರೆ ತನ್ನ ಕಣ್ಣುಗಳ ಮುಂದೆಯೇ ಸಾಕ್ಷಾತ್ ಪ್ರಭು ಶ್ರೀ ರಾಮಚಂದ್ರನನ್ನು ಕಂಡ ಶಬರಿಯು ಇಂದಿಗೆ ತನ್ನ ಜನ್ಮವು ಸಾರ್ಥಕವಾಯಿತೆಂದು ಭಾವಿಸುತ್ತಾಳೆ. ಅತ್ಯಾದರದಿಂದ ಶ್ರೀ ರಾಮಚಂದ್ರನನ್ನು ಆಶ್ರಮಕ್ಕೆ ಬರಮಾಡಿಕೊಳ್ಳುತ್ತಾಳೆ. ಅನೇಕ ವರ್ಷಗಳಿಂದ ತಾನು ಶ್ರೀ ರಾಮಚಂದ್ರನ ನಿರೀಕ್ಷೆಯಲಿದ್ದೆನೆಂದು ಶಬರಿ ಶ್ರೀರಾಮನಲ್ಲಿ ಹೇಳಿಕೊಳ್ಳುತಾಳೆ.

ಭಗವಾನ್ ಶ್ರೀ ರಾಮಚಂದ್ರನನ್ನು ಭೇಟಿಯಾದ ಬಳಿಕ ಶಬರಿಗೆ ತನ್ನ ಜೀವನದ ಪರಮ ಧ್ಯೇಯೋದ್ದೇಶವು ಈಡೇರಿದಂತೆ ಅನಿಸುತ್ತದೆ. ಅವಳು ಭಗವಂತನನ್ನು ಭಕ್ತಿ ಎಂದರೇನು ಎಂದು ತಿಳಿಸುವಂತೆ ಕೇಳಿಕೊಳ್ಳುತ್ತಾಳೆ. ಅದಕ್ಕೆ ಉತ್ತರವಾಗಿ ಶ್ರೀರಾಮಚಂದ್ರರು, ನೀನು ಈವರೆಗೆ ಮಾಡಿದ್ದೆಲ್ಲಾ ಭಕ್ತಿಯೇ ಎಂದು ಹೇಳುತ್ತಾರೆ. ಅವಳಿಗೆ ನವವಿಧ ಭಕ್ತಿಯ ಜ್ಞಾನ ನೀಡುತ್ತಾರೆ. ಶ್ರವಣ, ಕೀರ್ತನ, ಸ್ಮರಣ, ಪಾದ ಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ

ಮತ್ತು ಆತ್ಮನಿವೇದನ ಎಂಬ ನವವಿಧ ಭಕ್ತಿಯನ್ನು ವಿವರಿಸುತ್ತಾರೆ. ಭಗವಾನ್ ಶ್ರೀರಾಮಚಂದ್ರನಲ್ಲಿ ಮುಕ್ತಿಯನ್ನು ಬೇಡಿಕೊಳ್ಳುತ್ತಾ ಶಬರಿಯು ಅಗ್ನಿಯನ್ನು ಪ್ರವೇಶಿಸುತ್ತಾಳೆ.

ಭಗವಂತನ ಕುರಿತಾದ ನಿಷ್ಕಲ್ಮಶ, ಪ್ರಾಮಾಣಿಕ, ಹಾಗೂ ಪರಿಶುದ್ಧವಾದ ಭಕ್ತಿಯ ಶಕ್ತಿಯನೆಂಬುದನ್ನು ಶಬರಿಯ ಕಥೆಯು ನಮಗೆ ಬೋಧಿಸುತ್ತದೆ. ವ್ಯಕ್ತಿಯು ಯಾವುದೇ ಜಾತಿ, ಕುಲಕ್ಕೆ ಸೇರಿದವರೇ ಆಗಿರಲಿ, ಪರಿಶುದ್ಧವಾದ ಭಕ್ತಿಮಾರ್ಗದ ಮೂಲಕ ಯಾವಾಗಲೂ ಭಗವಂತನನ್ನು ಕೂಡಿಕೊಳ್ಳಲು ಸಾಧ್ಯವಿದೆ ಎಂಬುದನ್ನು ಶಬರಿಯ ಕಥೆಯು ನಮಗೆ ಮನವರಿಕೆ ಮಾಡಿಕೊಡುತ್ತದೆ.

**ಶ್ರೀರಾಮನು ಶಬರಿಗೆ ಹೇಳಿದ ನವ-ವಿಧ ಭಕ್ತಿ**

ಅಂತಹ ಶುದ್ಧ ಭಕ್ತಿ ಒಂಬತ್ತು ರೀತಿಯಲ್ಲಿ ವ್ಯಕ್ತವಾಗುತ್ತದೆ. ಮೊದಲನೆಯದು ಸತ್ಸಂಗ ಅಥವಾ ಪ್ರೀತಿಯ ಅಮಲಿನಲ್ಲಿರುವ ಭಕ್ತರು ಮತ್ತು ನೀತಿವಂತ ಜನರೊಂದಿಗೆ ಸಹವಾಸ. ಎರಡನೆಯದು ನನ್ನ ಅಮೃತದಂತಹ ಕಥೆಗಳನ್ನು ಕೇಳುವ ಅಭಿರುಚಿಯನ್ನು ಬೆಳೆಸಿಕೊಳ್ಳುವುದು. ಮೂರನೆಯದು ಗುರುವಿನ ಸೇವೆ. ನಾಲ್ಕನೆಯದು ನನ್ನ ಕೀರ್ತನ (ಸಾಮುದಾಯಿಕ ಮೇಳಗೀತ) ಹಾಡುವುದು ಜಪ ಅಥವಾ ನನ್ನ ಪವಿತ್ರ ನಾಮದ ಪುನರಾವರ್ತನೆ ಮತ್ತು ನನ್ನ ಭಜನೆಗಳನ್ನು ಪಠಿಸುವುದು. ಐದನೆಯದು ಯಾವಾಗಲೂ ಧರ್ಮಗ್ರಂಥದ ಆಜ್ಞೆಗಳನ್ನು ಅನುಸರಿಸುವುದು, ಇಂದ್ರಿಯಗಳ ನಿಯಂತ್ರಣವನ್ನು ಅಭ್ಯಾಸ ಮಾಡುವುದು. ಪಾತ್ರದ ಉದಾತ್ತತೆ ಮತ್ತು ನಿಸ್ವಾರ್ಥ ಸೇವೆ ಇವು ಭಕ್ತಿಯ ಆರನೇ ವಿಧಾನದ ಅಭಿವ್ಯಕ್ತಿಗಳಾಗಿವೆ. ಈ ಪ್ರಪಂಚದಲ್ಲಿ ಎಲ್ಲೆಲ್ಲೂ ಪ್ರಕಟವಾಗಿರುವ ನನ್ನನ್ನು ನೋಡುವುದು ಮತ್ತು ನನಗಿಂತ ಹೆಚ್ಚಾಗಿ ನನ್ನ ಸಂತರನ್ನು ಪೂಜಿಸುವುದು ಭಕ್ತಿಯ ಏಳನೆಯ ವಿಧಾನವಾಗಿದೆ. ಯಾರಲ್ಲಿಯೂ ಯಾವುದೇ ತಪ್ಪನ್ನು ಕಾಣದೇ ಇರುವುದು ಮತ್ತು ತನ್ನ ಪಾಲಿನಲ್ಲೇ ತೃಪ್ತರಾಗುವುದು ಭಕ್ತಿಯ ಎಂಟನೆಯ ವಿಧಾನವಾಗಿದೆ. ನನ್ನ ಶಕ್ತಿಯಲ್ಲಿ ಸಂಪೂರ್ಣ ನಂಬಿಕೆಯೊಂದಿಗೆ ಕಾಯ್ದಿರಿಸಿದ ಶರಣಾಗತಿ ಒಂಬತ್ತನೇ ಮತ್ತು ಅತ್ಯುನ್ನತ ಹಂತವಾಗಿದೆ.

"ಭಕ್ತಿಯ ಈ ಒಂಬತ್ತು ವಿಧಾನಗಳಲ್ಲಿ ಒಂದನ್ನು ಅಭ್ಯಾಸ ಮಾಡುವ ಯಾರಾದರೂ ನನ್ನನ್ನು ಹೆಚ್ಚು ಸಂತೋಷಪಡಿಸುತ್ತಾರೆ ಮತ್ತು ತಪ್ಪದೆ ನನ್ನನ್ನು ತಲುಪುತ್ತಾರೆ. ಶ್ರೇಷ್ಠ ಯೋಗಿಗಳಿಗೆ ಅತ್ಯಂತ ಕಷ್ಟಕರವಾದದ್ದು ನಿನ್ನ ಪ್ರಾಮಾಣಿಕ ಭಕ್ತಿಯಿಂದ ನಿನಗೆ ಸುಲಭವಾಗಿ ಪ್ರಾಪ್ತವಾಯಿತು." ಎಂದು ಶ್ರೀರಾಮ ಶಬರಿಗೆ ಹೇಳುತ್ತಾರೆ.

ತಪಸ್ಸು ಮಾಡುವ ಯೋಗಿಗಳು ಲಕ್ಷಾಂತರ ಜನ್ಮಗಳಿಂದಲೂ ಪಡೆಯಲು ಸಾಧ್ಯವಾಗದಂತಹ ಪರಮ ಸ್ಥಿತಿಯನ್ನು ಭಗವಂತನ ಕೃಪೆಯಿಂದ ಶಬರಿಯು ಪಡೆದಳು. ಭಗವಂತನು ತುಂಬಾ ಬುದ್ಧಿವಂತ. ತಾರ್ಕಿಕ ಮತ್ತು ಜ್ಞಾನವುಳ್ಳ ಜನರನ್ನು ಬಯಸುವುದಿಲ್ಲ ಬದಲಾಗಿ ಶ್ರದ್ಧೆಯುಳ್ಳ ಭಕ್ತರನ್ನು ಬಯಸುತ್ತಾನೆ. ಶಬರಿಯಲ್ಲಿ ಅಪಾರವಾದ ನಂಬಿಕೆ ಮತ್ತು ಅನುಪಮವಾದ ಗುರುಭಕ್ತಿ ಒಂದನ್ನು ಬಿಟ್ಟರೆ ಬೇರಾವ ವಿಶೇಷತೆಯೂ ಇರಲಿಲ್ಲ. ವರ್ಷಗಳು ಕಳೆದರೂ ರಾಮಚಂದ್ರ ತನ್ನ ಗುಡಿಸಲಿಗೆ ಖಂಡಿತ ಬರುತ್ತಾನೆ ಎಂಬ ಗುರುವಿನ ಮಾತಿನಲ್ಲಿ ನಂಬಿಕೆ ಇತ್ತು. ತನ್ನ ಇಡೀ ಜೀವನವನ್ನು ರಾಮಚಂದ್ರನ ನಿರೀಕ್ಷೆಯಲ್ಲಿ ಕಳೆದ ಅವಳು ಅಂತಿಮವಾಗಿ ಶ್ರೀರಾಮನ ಪಾದಗಳಲ್ಲಿ ವಿಲೀನಗೊಂಡಳು.

ಈ ರೀತಿ ಶಬರಿಯನ್ನು ಸ್ಮರಿಸುತ್ತಾ ಇಂದಿನ ಭಾವನಾತ್ಮಕ ವಿವೇಚನೆ ಮುಕ್ತಾಯವಾಯಿತು.

**ಪ್ರಶ್ನೋತ್ತರಗಳು**

**೧) ರೀನಾ ಅಕ್ಕ**

**ಪ್ರಶ್ನೆ**: ಶಾಲೆಗಳು ಗೀತಾ ವರ್ಗದಲ್ಲಿ ಹೆಸರನ್ನು ನೋಂದಾಯಿಸಿಕೊಳ್ಳುವುದು ಹೇಗೆ?

**ಉತ್ತರ : groups.learngeeta.com** ಈ **website** ನಲ್ಲಿ ಯಾವುದೇ ಸಂಸ್ಥೆಗಳು, ಸಂಘಟನೆಗಳು ಶಾಲೆಗಳು ಗೀತಾ ವರ್ಗದಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು.

**೨) ಶಿವಾಂಗಿ ಅಕ್ಕ**

**ಪ್ರಶ್ನೆ :** ಚಿಕ್ಕ ಮಕ್ಕಳಿಗೆ ಯಾವ ರೀತಿ ನಮ್ಮ ಶಾಸ್ತ್ರಜ್ಞಾನ ಹೇಳಬಹುದು?

**ಉತ್ತರ :** ಭಕ್ತ ಬಾಲಕ, ಭಕ್ತ ಬಾಲಿಕಾಯೇ, ವೀರ ಬಾಲಕ, ವೀರ ಬಾಲಿಕಾಯೇ ಮುಂತಾದ ಹಲವು ಗೀತಾಪ್ರೆಸ್ ನ

ಪುಸ್ತಕಗಳು ವಿಶೇಷವಾಗಿ ಮಕ್ಕಳಿಗಾಗಿಯೇ ಇವೆ. ಊಟ ಮಾಡುವಾಗ ಈ ಪುಸ್ತಕಗಳಲ್ಲಿಯ ಕಥೆಗಳನ್ನು ಮಕ್ಕಳಿಗೆ ಹೇಳಬಹುದು.

ಪ್ರಶ್ನೋತ್ತರಗಳ ನಂತರ ಸಮಾಪನ ಪ್ರಾರ್ಥನೆಯನ್ನು ಮಾಡಿ ಹನುಮಾನ್ ಚಾಲೀಸಾದೊಂದಿಗೆ ಇವತ್ತಿನ ವಿವೇಚನೆಯ ಅವಧಿ ಮುಕ್ತಾಯಗೊಳಿಸಲಾಯಿತು.

---

ಅರ್ಥ ವ್ಯಾಖ್ಯಾನದ ನಮ್ಮ ಈ ರಚನೆ ನಿಮಗೆ ತೃಪ್ತಿ ನೀಡಿದೆ ಎಂದು ಭಾವಿಸುತ್ತೇವೆ. ದಯಮಾಡಿ ಈ ಕೆಳಗಿನ ಕೊಂಡಿ ಬಳಸಿ ನಿಮ್ಮ ಪ್ರತಿಕ್ರಿಯೆ ನೀಡಬೇಕೆಂದು ವಿನಂತಿ.

https://vivechan.learngeeta.com/feedback/

**ಈ ಸಾರಾಂಶವನ್ನು ಓದಿದ್ದಕ್ಕಾಗಿ ನಿಮಗೆ ಧನ್ಯವಾದಗಳು**

ಅರ್ಥ ವಿವೇಚನೆಯ ಈ ಬರಹವನ್ನು ನೀವು ಆನಂದಿಸಿರುವಿರೆಂದು ಭಾವಿಸುತ್ತೇವೆ. ಬರಹದಲ್ಲಿ ದೋಷಗಳು ನುಸುಳದಂತೆ ಸಾಧ್ಯವಾದಷ್ಟು ಮಟ್ಟಿಗೆ ಪ್ರಯತ್ನಿಸಿದ್ದೇವೆ. ಆದರೂ, ಸಣ್ಣಪುಟ್ಟ ತಪ್ಪುಗಳಿರುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ಅವುಗಳನ್ನು ನಿರ್ಲಕ್ಷಿಸಿ ಸಹಕರಿಸಬೇಕೆಂದು ವಿನಂತಿ.

---

**ಜೈ ಶ್ರೀಕೃಷ್ಣ!**

ಸಂಕಲನ : ಗೀತಾ ಪರಿವಾರದ ಸೃಜನಾತ್ಮಕ ಬರವಣಿಗೆಯ ತಂಡ

---

**ಪ್ರತಿ ಮನೆಯಲ್ಲಿ ಗೀತೆ, ಪ್ರತಿ ಕರದಲ್ಲಿ ಗೀತೆ !**

ಗೀತಾ ಪರಿವಾರದ ಧ್ಯೇಯವನ್ನು ಪಸರಿಸಲು ನಾವೆಲ್ಲಾ ಒಂದಾಗೋಣ. ನಮ್ಮ ಬಂಧು-ಮಿತ್ರರಿಗೆ ಗೀತಾ ತರಗತಿಗಳ ಉಡುಗೊರೆಯನ್ನು ನೀಡೋಣ.

https://gift.learngeeta.com/

---

ಗೀತಾ ಪರಿವಾರ ಹೊಸ ಕ್ರಮ ಕೈಗೊಂಡಿದೆ. ಈ ಹಿಂದಿನ ಎಲ್ಲ ಅರ್ಥ ವಿವೇಚನೆಗಳ ಯೂಟ್ಯೂಬ್ ವೀಡಿಯೋಗಳನ್ನು ವೀಕ್ಷಿಸಬಹುದು ಹಾಗು ಪಿಡಿಎಫ್ ಆವೃತ್ತಿಯ ಬರಹಗಳನ್ನು ಓದಬಹುದು. ಇದಕ್ಕಾಗಿ ಕೆಳಗಾಣಿಸಿದ ಲಿಂಕ್ ಬಳಸಿರಿ.

https://vivechan.learngeeta.com/

---

**ಗೀತೆ ಕಲಿಯಿರಿ, ಗೀತೆ ಹರಡಿರಿ, ಗೀತೆ ಜೀವಿಸಿರಿ**

**|| ಓಂ ಶ್ರೀ ಕೃಷ್ಣಾರ್ಪಣಮಸ್ತು ||**